MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:49 ENGLISH DAILY Subscription Yearly - Rs. - FRIDAY 17-9-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಳೆ ಹೆಚ್ಚಳದಿಂದ ಕಾಳುಮೆಣಸು ಬೆಳೆಗೆ ಪ್ರತಿಕೂಲ ಪರಿಣಾಮ

ಕಾಳುಮೆಣಸು ಬೆಳೆ ಫಸಲು ಬಲಿಯುತ್ತಿರುವಾಗ ಹೆಚ್ಚಿದ ಮಳೆಯಿಂದಾಗಿ, ಕಾಳುಮೆಣಸು ಬೆಳೆಯುವ ಪ್ರದೇಶಗಳಲ್ಲಿ ಕಾಳುಮೆಣಸಿನ ಬಳ್ಳಿಗಳಿಗೆ ಕೊಳೆರೋಗ ಹಾಗೂ ಕಾಳುಮೆಣಸು ಉದುರುತ್ತಿರುವ ವರದಿಗಳು ಕೇಳಿ ಬರುತ್ತಿವೆ. ಇದರಿಂದ ಈ ವರ್ಷದ ದೇಶೀ ಕಾಳುಮೆಣಸು ಉತ್ಪಾದನೆಯಲ್ಲಿ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಗಳಿದ್ದು ಇಳುವರಿ ಕುಸಿತ ಕಾಣುವ ಸಂಭವಿದೆಯೆನ್ನಲಾಗಿದೆ.

## ಹೊಸ ಅಡಿಕೆ ದರ ಹೆಚ್ಚಳ

ಹೊಸ ಅಡಿಕೆ(ಚಾಲಿ) ದರ ಕೆ.ಜಿ. ಗೆ 500 ದಾಟಿದ್ದು, ಬೇಡಿಕೆ ಹೆಚ್ಚಳದಿಂದ ಹಾಗೂ ಪೂರೈಕೆ ನಿರೀಕ್ಷಿತ ಪ್ರಮಾಣದಲ್ಲಿರುವುದರಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಇದರೊಂದಿಗೆ ಅನಧಿಕೃತ ಆಮದು ಇಳಿಕೆಯೂ ದರ ಹೆಚ್ಚಳಕ್ಕೆ ಪೂರಕವಾಗಿದೆ. ಈ ವರ್ಷ ನಿರಂತರ ಅಧಿಕ ಮಳೆಯಿಂದ ಮಲೆನಾಡಿನಲ್ಲಿ ಅಡಿಕೆ ಬಲಿಯುವ ಸಮಯದಲ್ಲಿ ಕೊಳೆರೋಗ ಬಾಧಿಸಿ ಎಳೆ ಅಡಿಕೆ ಉದುರುತ್ತಿವೆಯೆನ್ನಲಾಗಿದೆ. ಕೊಳೆರೋಗ ಬಾಧಿತ ಭಾಗಗಳಲ್ಲಿ ಅಡಿಕೆ ಇಳುವರಿಯ ಮೇಲೆ ಪ್ರತಿಕೂಲ ಪರಿಣಾಮವುಟಾಂಗುವ ಸಾಧ್ಯತೆಯಿದೆಯೆನ್ನಲಾಗಿದೆ.